**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

**ಗುಂಡ್ಲುಪೇಟೆ**

**ಸಿಸಿ . ನಂ. 886/2022**

**ಫಿರ್ಯಾದಿ : ತೆರಕಣಾಂಬಿ ಪೊಲೀಸ್ ಠಾಣೆ**

ವಿರುದ್ಧ

**ಆರೋಪಿತರು** : 1. **ಪ್ರಸಾದ್ ಅಲಿಯಾಸ್ ಡಾಲಿ, 31 ವರ್ಷ**
ಬಿನ್ ಬಸವಣ್ಣ ,
ಹಂಗಳ ಗ್ರಾಮ, ಗುಂಡ್ಲುಪೇಟೆ ತಾಲ್ಲೂಕು

2. **ಸೌಭಾಗ್ಯ ಅಲಿಯಾಸ್ ಭಾಗ್ಯ**
**ಕೋಂ ರಮೇಶ್ , 35 ವರ್ಷ**
ಬೆಟ್ಟಹಳ್ಳಿ ಗ್ರಾಮ, ಗುಂಡ್ಲುಪೇಟೆ ತಾಲ್ಲೂಕು
ಸ್ವಂತ ಊರುಃ ಯಡುವನಹಳ್ಳಿ ಗ್ರಾಮ,
ಗುಂಡ್ಲುಪೇಟೆ ತಾಲ್ಲೂಕು
ಹಾಲಿವಾಸಃ ಚಾಮಲಾಪುರದಹುಂಡಿ ಗ್ರಾಮ,
ನಂಜನಗೂಡು ತಾಲ್ಲೂಕು

## ದೋಷಾರೋಪಣೆ

**ಶ್ರೀ. ಶಿವಕುಮಾರ.ಜಿ.ಜೆ, ಬಿ.ಎ, ಎಲ್ ಎಲ್ ಬಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಗುಂಡ್ಲುಪೇಟೆ** ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮಗಳ ಮೇಲೆ ಹೊರೆಸುವ ದೋಷಾರೋಪಣೆ.

**ಮೊದಲನೇಯದಾಗಿ,** ದಿನಾಂಕಃ 12.08.2022 ರಂದು ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ಆರಾಧ್ಯ ಗೋಲ್ಡ್ ಕಂಪನಿಯ ಮ್ಯಾನೇಜರ್ ಆದ ಚಾಸಾ 1 ಸಂತೋಷ್.ಬಿ.ಸಿ ರವರಿಗೆ ಕರೆ ಮಾಡಿ, ನೀವು ಗಿರವಿ ಇಟ್ಟಿರುವ ಚಿನ್ನವನ್ನು ಬಿಡಿಸಿ, ನಿಮ್ಮ ಕಂಪನಿಗೆ ಮಾರಾಟ ಮಾಡುವುದಾಗಿ ನಂಬಿಸಿ, ದಿಃ 13.08.2022

ರಂದು ಮಧ್ಯಾಹ್ನ ಸು. 2.30 ಗಂಟೆ ಸಮಯದಲ್ಲಿ ಚಾಸಾ 1 ರವರನ್ನು ತೆರಕಣಾಂಬಿ ಪೊಲೀಸ್ ಠಾಣಾ ಸರಹದ್ದು, ತೆರಕಣಾಂಬಿಹುಂಡಿ ಗ್ರಾಮದ ಬಸ್ ನಿಲ್ದಾಣದ ಬಳಿ ಬರಮಾಡಿಕೊಂಡು, ಚಾಸಾ 1 ರವರಿಗೆ ಅಕ್ರಮವಾಗಿ ನಷ್ಟ ಉಂಟು ಮಾಡುವ ಉದ್ದೇಶದಿಂದ ಚಾಸಾ 1 ರವರಿಂದ 1,65,000-00 ರೂ. ನಗದನ್ನು ಪಡೆದು ಚಿನ್ನವನ್ನು ಬಿಡಿಸಿಕೊಂಡು ಬರುವುದಾಗಿ ಹೇಳಿ ಚಾಸಾ 1 ರವರಿಗೆ ನಂಬಿಸಿ ನಂತರ ವಾಪಸ್ ಬಾರದೇ ತಪ್ಪಿಸಿಕೊಂಡು ಹೋಗಿ ಚಾಸಾ 1 ರವರಿಗೆ ವಂಚನೆ ಮಾಡಿರುವ ಕಾರಣ **ಭಾರತೀಯ ದಂಡ ಸಂಹಿತೆ ಕಲಂ 420 ಸಹವಾಚಕ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

**ಎರಡನೇಯದಾಗಿ,** ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಚಾಸಾ 1 ರವರಿಗೆ ಮೋಸ ಮಾಡಿ ಚಾಸಾ 1 ರವರಿಂದ 1,65,000-00 ರೂ. ನಗದನ್ನು ಪಡೆದು ಚಿನ್ನವನ್ನು ಬಿಡಿಸಿಕೊಂಡು ಬರುವುದಾಗಿ ಹೇಳಿ ಅವರನ್ನು ನಂಬಿಸಿ ನಂತರ ವಾಪಸ್ ಬಾರದೇ ತಪ್ಪಿಸಿಕೊಂಡು ಹೋಗಿ ಚಾಸಾ 1 ರವರನ್ನು ವಂಚಿಸಿ ಅಪ್ರಾಮಾಣಿಕವಾಗಿ ಹಣವನ್ನು ಕಳ್ಳತನ ಮಾಡಿಕೊಂಡು ಹೋಗಿರುವ ಕಾರಣ ನೀವುಗಳು **ಭಾರತೀಯ ದಂಡ ಸಂಹಿತೆ ಕಲಂ 379 ಸಹವಾಚಕ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಆದ್ದರಿಂದ, ಆರೋಪಿತರಾದ ನೀವು ಮೇಲ್ಕಂಡ ದಂಡನೀಯ ಅಪರಾಧಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಒಳಪಡತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ

ದಿಃ 03.12.2022.

**(ಶಿವಕುಮಾರ ಜಿ . ಜೆ )**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,**

**ಗುಂಡ್ಲುಪೇಟೆ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

**ಗುಂಡ್ಲುಪೇಟೆ**

**ಸಿಸಿ . ನಂ. 886/2022**

**ಫಿರ್ಯಾದಿ** : ತೆರಕಣಾಂಬಿ ಪೊಲೀಸ್ ಠಾಣೆ

ವಿರುದ್ಧ

**ಆರೋಪಿಯ ಹೆಸರು** : 1. ಪ್ರಸಾದ್ ಅಲಿಯಾಸ್ ಡಾಲಿ

# ಆರೋಪಣೆ

ಪ್ರಶ್ನೆ : 1. ಆಪಾದನೆಗಳ ಸಾರಾಂಶ ನಿಮಗೆ ಅರ್ಥವಾಯಿತೇ?

ಉತ್ತರ : ಅರ್ಥವಾಯಿತು

ಪ್ರಶ್ನೆ : 2. ಆಪಾದನೆಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ ?

ಉತ್ತರ : ತಪ್ಪು ಮಾಡಿಲ್ಲ, ವಿಚಾರಣೆ ಆಗಲೀ.

ದಿನಾಂಕ : 03.12.2022 ರಂದು ಆರೋಪಿಗೆ ಆಪಾದನೆ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಿದಾಗ ಅವರು ಕೊಟ್ಟ ಹೇಳಿಕೆಯನ್ನು ನನ್ನ ಸಮಕ್ಷಮ ಬರೆದುಕೊಂಡು ಸತ್ಯವಾಗಿದೆ ಅಂತ ನಾನು ದೃಢಪಡಿಸುತ್ತೇನೆ.

**(ಶಿವಕುಮಾರ ಜಿ . ಜೆ )**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,**
**ಗುಂಡ್ಲುಪೇಟೆ**

1 ನೇ ಆರೋಪಿಯ ಸಹಿ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

**ಗುಂಡ್ಲುಪೇಟೆ**

**ಸಿಸಿ . ನಂ. 886/2022**

**ಫಿರ್ಯಾದಿ** : ತೆರಕಣಾಂಬಿ ಪೊಲೀಸ್ ಠಾಣೆ

ವಿರುದ್ಧ

**ಆರೋಪಿಯ ಹೆಸರು** : 2. ಸೌಭಾಗ್ಯ ಅಲಿಯಾಸ್ ಭಾಗ್ಯ

# ಆರೋಪಣೆ

ಪ್ರಶ್ನೆ : 1. ಆಪಾದನೆಗಳ ಸಾರಾಂಶ ನಿಮಗೆ ಅರ್ಥವಾಯಿತೇ?

ಉತ್ತರ : ಅರ್ಥವಾಯಿತು

ಪ್ರಶ್ನೆ : 2. ಆಪಾದನೆಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ ?

ಉತ್ತರ : ತಪ್ಪು ಮಾಡಿಲ್ಲ, ವಿಚಾರಣೆ ಆಗಲೀ.

ದಿನಾಂಕ : 03.12.2022 ರಂದು ಆರೋಪಿಗೆ ಆಪಾದನೆ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಿದಾಗ ಅವರು ಕೊಟ್ಟ ಹೇಳಿಕೆಯನ್ನು ನನ್ನ ಸಮಕ್ಷಮ ಬರೆದುಕೊಂಡು ಸತ್ಯವಾಗಿದೆ ಅಂತ ನಾನು ದೃಢಪಡಿಸುತ್ತೇನೆ.

**(ಶಿವಕುಮಾರ ಜಿ . ಜೆ )**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,**

**ಗುಂಡ್ಲುಪೇಟೆ**

2 ನೇ ಆರೋಪಿಯ ಸಹಿ